"....."

"ವಿಷ್ಣು ನಾಯಕ ನಮಗೆ ದೂರದ ಸಂಬಂಧಿ. ಮುಂದೆ ಉಷಾಳನ್ನು ಅವನಿಗೆ ಕೊಡುವ ಯೋಚನೆ ಕೂಡಾ ಇದೆ..."

"....."

"ದೇವ್ರೂ... ನಿನಗೆ ಹಣ ತಾನೇ ಬೇಕು? ಉಷಾ ಹೆಸರಿನಲ್ಲಿ ಮನೆ ಇದೆ. ಹಣ ಇದೆ. ಅಡಿಕೆ ತೋಟವಿದೆ. ಚಂಡ್ಯದಲ್ಲಿ ಗದ್ದೆ ಕೂಡಾ ಉಂಟು.''

''.....''

''ನಿನಗೆ ಎಷ್ಟು ಹಣ ಬೇಕು ಹೇಳು? ಮೂರು ದಿನದಲ್ಲಿ ಒದಗಿಸಿಕೊಡ್ತೀನಿ. ಹಣಕೊಂಡು ನಿಮ್ಮ ಬಯಲುಸೀಮೆಗೆ ಹೋಗಿ ಏನಾದರೂ ವ್ಯಾಪಾರ ಮಾಡಿ ಜಮೀನು ತೆಗೆದು ಸುಖವಾಗಿರು..."

...ಗೋಪಾಲನಾಯಕರು ಗದ್ಗದಿತರಾದರು, ನಿಧಾನಕ್ಕೆ ದೇವರಾಜನ ಕಾಲಿನ ಮೇಲೇ ಕುಸಿದುಬಿಟ್ಟರು. ಮಕ್ಕಳಂತೆ ಬಿಕ್ಕಳಿಸುತ್ತಾ–

"ನಿನ್ನ ಕೈ ಮುಗಿತೀನಪ್ಪ. ಅವಳ ಸಹವಾಸ ಬಿಟ್ಟುಬಿಡು. ಈಗ ಮನೆಗೆ ಹೋಗು. ನಾನು ಬೆಳಿಗ್ಗೆ ಶ್ರೀರಾಮು ಹತ್ತಿರ ಮಾತಾಡ್ತೀನಿ..."

ದೇವರಾಜ ನಿಧಾನಕ್ಕೆ ನಾಯಕರನ್ನು ಮೇಲೆತ್ತಿದ. ಉತ್ಸಾಹದಿಂದ, "ಎಷ್ಟು ಬೇಕಾದ್ರೂ ಕೊಡ್ತೀರಾ?" ಎಂದ...

"ಓಹ್! ನೀನು ಸುಖವಾಗಿರುವಷ್ಟು. ಜೀವನವೆಲ್ಲಾ ಕುಳಿತು ತಿನ್ನುವಷ್ಟು" ನಾಯಕರ ಮುಖ ಗೆಲುವಾಯಿತು...

"ಯೋಚನೆ ಮಾಡಿ ಹೇಳ್ತಿನಿ. ಲೆಕ್ಕ ಸಿಕ್ತಾ ಇಲ್ಲ. ಕೂತು ಲೆಕ್ಕಾಚಾರ ಹಾಕಿ ಮೂರು ದಿನಾ ಬಿಟ್ಟು ನಂತರ ಬರ್ತೀನಿ. ಹಣ ರೆಡಿ ಇಟ್ಟಿರ್ಬೇಕು..." ತುಂಟತನದ ನಗೆ ಇತ್ತು ಹುಡುಗನ ಮುಖದಲ್ಲಿ.

ತೊಟ್ಟಿಕ್ಕುವ ಬಟ್ಟೆಯಲ್ಲೇ ನಿಧಾನಕ್ಕೆ ಉಷಾ ಮಲಗಿದ್ದ ಮಂಚದ ಬಳಿಗೆ ನಡೆದ. ಎಲ್ಲಿ ಎಚ್ಚರಗೊಳ್ಳುತ್ತಾಳೋ ಎಂದು ಹಣೆಗೆ ಮೃದುವಾಗಿ ಚುಂಬಿಸಿದ. ಗೋಪಾಲ ನಾಯಕರು ದಿವ್ಯವಿಷಾದದಿಂದ ನೋಡುತ್ತಿದ್ದರು. ಮೈತುಂಬಾ ಹೊದಿಸಿ ಒಮ್ಮೆ ತಲೆ ನೇವರಿಸಿದ. ಉಷಾ ಹಾಗೆಯೇ ಮಲಗಿದ್ದಳು. ಈ ಬದುಕಿನ ಬರ್ಬರತೆಗಳನ್ನು ನಾನು ತಾಳಲಾರೆ. ನನಗೆ ನಾವೇ ಹಾಡಿ ಕುಣಿವ ನಲಿವ, ಹುಟ್ಟು ಸಾವು ಹಸಿವು ರೋಗ ಮತ್ತು ಅಂತಸ್ತಿನ ಭಯಗಳಿಲ್ಲದ ಲೋಕವೊಂದು ಬೇಕು, ನನಗೆ ವಿಶ್ರಾಂತಿ ಬೇಕು ಎಂಬುದನ್ನು ಮುಖ ಭಾವದಲ್ಲಿ ಬರೆದಿಟ್ಟು ಕಣ್ಮುಚ್ಚಿ ಮಲಗಿದ್ದಳು–ಪುಟ್ಟ ಹುಡುಗಿ. ಅದನ್ನು ಓದಿಕೊಂಡ ದೇವರಾಜ.

"ನಾನು ಬರ್ತೀನಿ ಸಾರ್" ಸುರಿವ ಮಳೆಯಲ್ಲೇ ಹೊರಬಿದ್ದ. ಓಟದ ನಡಿಗೆಯಲ್ಲಿ ಮನೆಗೆ ಸಮೀಪವಾಗಿದ್ದ ಬೀಚ್‌ನ ಬಳಿಗೆ ಬಂದ. ತೋಟಗಾರಿಕಾ ಕಚೇರಿಯ ಪಕ್ಕದ ಕಿರುಹಾದಿಯಲ್ಲಿ ನುಸುಳಿ ಕಡಲಿನ ಬಳಿಗೆ ಓಡಿ ಬಂದುಬಿಟ್ಟ. ಅಲೆಗಳು ದೊಡ್ಡವಿವೆ, ಯಾರೂ ಸಮೀಪಕ್ಕೆ ಹೋಗಬಾರದು, ಮೀನು ಹಿಡಿಯಬಾರದು ಎಂಬ ಎಚ್ಚರಿಕೆಗಳಿದ್ದರೂ ಉಲ್ಲಂಘಿಸಿ ತುಂಬ ಸಮೀಪಕ್ಕೆ ಬಂದ, ತಾಯಿಯ ಬಳಿಗೆ ಕರು ಬರುವುದಿಲ್ಲವೇ? ಅಮ್ಮನನ್ನು ಕಂಡು ಎತ್ತಿಕೋ ಎಂದು ಮಗು ಕೈ ಚಾಚುವುದಿಲ್ಲವೇ? ಈಗ ಅವನಿಗೆ ಸಮುದ್ರದ ಅಬ್ಬರ ಜೋಗುಳವಾಗಿತ್ತು. ಅಲೆಗಳ ಹೊಡೆತದಿಂದ ಉಂಟಾದ ಸಿಂಚನ ತಾಯಿಯ ಸ್ತನ್ಯಪಾನದಂತಿತ್ತು. ಪಾದಗಳನ್ನು